ದಿನಾಂಕ ಮೇ 02 ಮತ್ತು 03/2019 ರಂದು ಅನಂತಾಚಾರ್ ಸ್ಮಾರಕ ಅಂತರ ಕಾಲೇಜು ಮಟ್ಟದ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿಯನ್ನು ಬಹಳ ವಿಜೃಂಭಣೆಯಿಂದ ನಡೆಸಲಾಯಿತು. ಈ ಪಂದ್ಯಾವಳಿಗೆ ಮುಖ್ಯ ಅತಿಥಿಗಳಾಗಿ **ಬಸವನಗುಡಿ ವಿಧಾನ ಸಭಾಕ್ಷೇತ್ರದಎಂ.ಎಲ್.ಎ ಶ್ರೀ ಎಲ್.ಎ. ರವಿಸುಬ್ರಮಣ್ಯ ಹಾಗೂ ಬೆಂಗಳೂರು ನಗರ ಸಭಾ ಸದಸ್ಯರಾದ ಶ್ರೀ ಎಂ. ವೆಂಕಟೇಶ್**ರವರು ಆಗಮಿಸಿದ್ದರು. ಅಧ್ಯಕ್ಷತೆಯನ್ನು ನಮ್ಮ ಸಂಸ್ಥೆಯ ಅಧ್ಯಕ್ಷರಾದ **ಶ್ರೀ ಟಿ.ವಿ.ಮಾರುತಿ** ಯವರು ವಹಿಸಿದ್ದರು. ಸಂಸ್ಥೆಯ ಇತರ ಎಲ್ಲಾ ಪದಾಧಿಕಾರಿಗಳು ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಈ ಪಂದ್ಯಾವಳಿಯಲ್ಲಿ ಸುಮಾರು 18 ವಿವಿಧ ಕಾಲೇಜುಗಳ ಕ್ರಿಕೆಟ್ ತಂಡಗಳು ಭಾಗವಹಿಸಿದ್ದವು. ಅಂತಿಮ ಪಂದ್ಯಾವಳಿಯಲ್ಲಿ ನಮ್ಮತಂಡವು ವಿನ್ನರ್ಸ್ ಆಗಿಜಯ ಭೇರಿ ಭಾರಿಸಿತು.

ದಿನಾಂಕ 20-05-2019ರ ಸೋಮವಾರದಂದು ಕಾಲೇಜಿನ ವಾರ್ಷಿಕ ದಿನಾಚರಣೆಯನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಈ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಜಯದೇವ ಆಸ್ಪತ್ರೆಯ ನಿರ್ದೇಶಕರಾದ ಪದ್ಮಶ್ರೀ ಡಾ. ಸಿ.ಎನ್.ಮಂಜುನಾಥ್‌ರವರು ಹಾಗೂ ಕರ್ನಾಟಕ ರಾಜ್ಯ ಅಗ್ನಿ ಶಾಮಕ ಸಂಸ್ಥೆಯ ಮುಖ್ಯಸ್ಥರಾದ ಡಿ.ಐ.ಜಿ. ಡಾ. ಬಿ.ಆರ್. ರವಿಕಾಂತೇಗೌಡ, ಐ.ಪಿ.ಎಸ್ ರವರು ಆಗಮಿಸಿದ್ದರು ಮತ್ತು ಈ ಸಮಾರಂಭದಲ್ಲಿ ಸಂಸ್ಥೆಯಎಲ್ಲಾ ಪದಾಧಿಕಾರಿಗಳು ಕಾಲೇಜಿನ ಪ್ರಾಚಾರ್ಯರು ಉಪಸ್ಥಿತರಿದ್ದರು. ಮುಖ್ಯ ಅತಿಥಿಗಳು ಮಾತನಾಡಿ ಇಂದಿನ ಯುವ ಜನಾಂಗ ಆಧುನಿಕ ತಂತ್ರಜ್ಞಾನದ ದುರುಪಯೋಗದಿಂದ ತಮ್ಮ ಭವಿಷ್ಯವನ್ನು ಹಾಳು ಮಾಡಿಕೊಳ್ಳುತ್ತಿರುವ ಬಗ್ಗೆ ಎಚ್ಚರಿಕೆಯನ್ನು ನೀಡಿ ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ಬದುಕಲು ಪ್ರಯತ್ನಿಸುವಂತೆ ಹಿತ ನುಡಿಗಳನ್ನು ನುಡಿದರು. ಈ ಸಂದರ್ಭದಲ್ಲಿ ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ನೀಡಲಾಯಿತು.

ಕಾಲೇಜಿನ ಕ್ರೀಡಾ ವಿಭಾಗದ 2018-19ರ ಸಾಲಿನ ಕ್ರೀಡಾ ಚಟುವಟಿಕೆಗಳನ್ನು ಕ್ರಿಯಾತ್ಮಕವಾಗಿ ಹಾಗೂ ಯಶಸ್ವಿಯಾಗಿ ನಡೆಸಲು ಸಹಕರಿಸಿದ ಸಂಸ್ಥೆಯ ಅಧ್ಯಕ್ಷರಾದಿಯಾಗಿ ಎಲ್ಲಾ ಪದಾಧಿಕಾರಿಗಳಿಗೂ ಹಾಗೂ ಕಾಲೇಜಿನ ಪ್ರಾಚಾರ್ಯರು, ಉಪನ್ಯಾಸಕ ವರ್ಗ, ಕಛೇರಿ ಸಿಬ್ಬಂದಿ ಮತ್ತು ನನ್ನ ಪ್ರೀತಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

***** ಜೈಕರ್ನಾಟಕ ಮಾತೆ ***** ಜೈಹಿಂದ್ *******

**ಡಾ.ಡಿ.ಸಿ.ಶಿವಣ್ಣ**
ದೈಹಿಕ ಶಿಕ್ಷಣ ನಿರ್ದೇಶಕರು
ದೈಹಿಕ ಶಿಕ್ಷಣ ವಿಭಾಗ

## NCC REPORT OF 2018-19

- The NCC activity for the year 2018-19 began with a selection of cadets for CSUO, TSC & Best cadet. Which was conducted by 7 KAR BN NCC Unit.
- CDT. Venkatesh J attended the Best cadet selection camp at yallahanka , conducted by 8 KAR BN NCC from 02/May/2018 to 11/May/2018.
- On 03/May/2018, APS College of Commerce organized Blood donation camp, cadet actively participated in the event.
- From 13/May/18 to 22/May/2018 7 cadet , 5 SD's & 2 SW's attended CATC at Delhi Public School East Sullikunte, which was conducted by 8 KAR BN NCC.
- On may 15 CDT. Venkatesh J attended IMA interview in 7 KAR BN NCC unit.
- On 21/June/2018 International Yoga Day was organized by NCC Bangalore 'B' Group at Manekshaw Parade Ground where second year and third year cadets participated along with Lt. Lakshmidevi L.P.
- On 21/June/2018 to 29/June/2018 CDT. Manasa G R attended the TSC selection camp at Gitam University, Doddabalapura, which was conducted by 10 KAR BN NCC.
- On 07/July/2018 cadets of our college are the part of the inguration of new camp/ firing range at Hosakerahalli by education minister Dr. Sharan prakash patil which was organized by Bangalore B group.



Principal
A.P.S. College of Commerce
N. R. Colony,

- On 10/July/2018, the 1st yrs selection for NCC was conducted by SUBEDAR MAJOR Beer Singh, HAV Manimaran & LT. Lakshmi devi ANO.
- On the same day Ranks were selected among 3rd years cadets and the cadets achieved their respective ranks. The Ranks were judged by SUBEDAR MAJOR Beer Singh, HAV Manimaran & LT. Lakshmi devi ANO. The Rank piping was done with the support of Dr. B.Paramesh, principal of APS College of Commerce.
- On 13/July/2018 to 22/July/2018 19 cadets, 13 SD's and 6 SW's attended CATC/Pre-TSC at Gitam University, Doddaballapura, which was conducted by 7 KAR BN NCC.
- On 24/July/2018 to 02/Aug/2018 CDT Manasa G R attended TSC camp at Annie Besant, Doddaballapura, which was conducted by 8 KAR BN NCC.
- On 02/Aug/2018 to 11/Aug/2018 CDT Manasa G R attended TSC camp at Annie Besant, Doddaballapura, which was conducted by 1 Air NCC.
- On 09/Aug/2018 to 04/Sep/2018 CDT Lakshmi J attended mountaineering expedition at New Delhi.
- On 13/Aug /2018 to 22/Aug/2018 CDT Manasa GR attended TSC-IGC (Girl) held at GPT Ground, Tumkur, which was conducted by 4 KAR BN NCC.
- On 15/Aug/2018, 71st Independence Day was celebrated which was organized by APS Education Trust at APS Ground, N R Colony and our Cadets achieved 1st prize in drill competition.
- On 20/Aug/2018 to 31/Aug/2018 CDT Ranjith.S attended ATC held at 15 Dogra regiment Banasvadi conduct by 8 KAR BN NCC.
- On 08/Sep/2018 RDC unit level selection was held APS Ground by 7 KAR BN NCC. Four cadets were selected for RDC camp:-JUO Venkatesh J, CDT Manasa G R, Shasahnk Y, Harish Naik.
- On 14/Sep/2018 Traffic awareness programme was conducted by 6A/6 COY, NCC and lecture was given by one of the ex-cadet Mr Jayaprakash.
- On 17/Sep/2018 to 26/Sep/2018 RDC IGC-1 camp was held at Annie Besant, Doddaballapura by 39 KAR BN NCC. JUO Venkatesh J, CDT Manasa G R, Shasahnk Y, Harish Naik, Raghu L attended the camp.
- On 22/Sep/2018 Swachh Bharat Abhiyan rally was conducted by 6A/6 COY NCC. The rally was commenced from Bugle rock via DVG Road 50 cadets 1 PI staff with 1 ANO returned to the college.
- On 25/Sep/2018 Anti-tobacco rally and skit was performed by the cadets at Bugle Rock. ANO and PI staff were present to create the awareness among the public.
- On 27/Sep/2018 to 06/Oct/2018 CATC/RDC IGC-2 was held at Annie Besant Park Doddaballpura by 10 KAR BN NCC. CDT Ranjit N S, Manjunath R Role, Shyam Naik, Sanjay and Gagan Kumar cadets attended the camp.
- On 01/Oct/2018 Blood Donation camp conducted by APS College of Commerce in association with Lions Club in our college and Blood was donated by our cadets Hari Haran T L S, Neeraj H T, Gagan Kumar, other cadets and students.
- On 12/Oct/2018 to 21/Oct/2018 CATC/RDC IGC-3 was held at Al-Ameen college, Hoskote conducted by 10 KAR BN NCC and 3rd year 5 SD's attended the camp.
- On 18/Oct/2018 to 29/Oct/201 ...B-1 (EK BHARAT SHRESHTA BHARAT-1 ... Haran T L S and Vidya Shree alo...

Lt Lakshmi Devi L P attended the camp at KSUO, Mysore which was conducted by 3 girls KAR BN NCC.

- On 01/Nov/2018 to 10/Nov/2018 CATC/ RDC IGC Was held at Christ Universty, Kengeri by 9 KAR BN NCC and 1 SW of 3rd year attended the camp.
- On 10/Nov/2018 Save and Educate Girl Child event was conducted by 6A/6 COY NCC. A lecture was given by Shilpa B, B com gold medal, Village Accountant, Doddaballapura on the day skit and dance performance was given by the cadets to give awareness regarding Save and Educate Girl Child.
- On 25/Dec/2018 to 04/Jan/2019 ATC was held at Secunderabad, Thelangana conducted by 8 KAR BN NCC and 3 SD's of 2nd year attended the camp. The cadets where CDT Ranjith.N.S, Harish Naik, Raghu.L.
- On 22/Jan/2019 to 26/Jan/2019 2nd year CDT Shashank and Krishna Bhargav.B.S attended LEADERSHIP camp held at Alva's College, Moodbidri conducted by KAR & GO DTE.
- On 26/Jan/2019, 70th Republic Day was celebrated which was organized by APS Education Trust at APS Ground, N R Colony and our Cadets achieved 2nd prize in drill competition.
- On 09/Feb/2019 "If you dream it you can do it" a motivational speech was given by Rohith Saraswathi who shared his experience of climbing MT. EVEREST.

**Lt. Lakshmidevi L.P.**
NCC Officer

## ಎನ್.ಎಸ್.ಎಸ್. ಕಾರ್ಯ ಚಟುವಟಿಕೆಗಳ ವಾರ್ಷಿಕ ವರದಿ

- ದಿನಾಂಕ:- **07-08-2018**ರಂದು ಎನ್.ಎಸ್.ಎಸ್ ಕಾರ್ಯ ಚಟುವಟಿಕೆಗಳನ್ನು ನಡೆಸುವುದರ ಸಲುವಾಗಿ, ಪ್ರಾಂಶುಪಾಲರ ಕೊಠಡಿಯಲ್ಲಿ ಸಭೆಕರೆಯಲಾಗಿತ್ತು. ಈ ಸಂದರ್ಭದಲ್ಲಿ ಸಭೆಯಲ್ಲಿ, ಎನ್.ಎಸ್.ಎಸ್ ವಿದ್ಯಾರ್ಥಿಗಳ ನೋಂದಣಿಯ ಬಗ್ಗೆ, ಎನ್.ಎಸ್.ಎಸ್ ಉದ್ಘಾಟನಾ ಸಮಾರಂಭದ ಬಗ್ಗೆ, ಹಾಗೂ ಎನ್.ಎಸ್.ಎಸ್. ಕಾರ್ಯ ವಿಚಾರವಾಗಿ ಚಟುವಟಿಕೆಗಳು. ಪ್ರಾಂಶುಪಾಲರು ಮತ್ತು ಸಮಿತಿಯ ಸದಸ್ಯರ ಸಮ್ಮುಖದಲ್ಲಿ ಚರ್ಚಿಸಲಾಯಿತು. ಈ ಸಭೆಯಲ್ಲಿ ಭಾಗವಹಿಸಿದ್ದವರು, ಪ್ರಾಂಶುಪಾಲರು, ಎನ್.ಎಸ್.ಎಸ್ ಕಾರ್ಯಾಧಿಕಾರಿಗಳಾದ ವೆಂಕಟೇಶಯ್ಯ ಕೆ.ಎಂ, ಸದಸ್ಯರಾದ ರೇಣುಕಯ್ಯ ಟಿ, ರಶ್ಮಿ ಜಿ, ರಾಜುಮುತ್ತು, ಐ.ಕ್ಯೂ.ಎ.ಸಿ. ಸಂಚಾಲಕರಾದ ಶ್ರೀಮತಿ ಲಕ್ಷ್ಮೀಕಿತ್ತೂರ್ ಭಾಗವಹಿಸಿದ್ದರು.
- ದಿನಾಂಕ:-**11-08-2018**ರಂದು ಎನ್.ಎಸ್.ಎಸ್. ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಲಾಯಿತು. ಈ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಡಾ. ಶಶಿಕಲಾ ಎ.ಪಿ.ಎಸ್. ಸಂಜೆ ಕಾಲೇಜು ನಿವೃತ್ತ ಪ್ರಾಧ್ಯಾಪಕರು ಆಗಮಿಸಿದ್ದರು. ಇವರು ಎನ್.ಎಸ್.ಎಸ್. ಎಂದರೇನು? ವಿದ್ಯಾರ್ಥಿಗಳು ಬದಕನ್ನು ರೂಪಿಸಿಕೊಳ್ಳುವ ಬಗೆ ಹೇಗೆ? ಎಂಬ ವಿಷಯಗಳನ್ನು ಕುರಿತು ವಿವರವಾಗಿ ಮಾತನಾಡಿದರು. ವಿದ್ಯಾರ್ಥಿಗಳು ತಪ್ಪುದಾರಿಯನ್ನು ಸರಿಪಡಿಸುವ ಮತ್ತು ಸರಿಪಡಿಸಿಕೊಳ್ಳುವ ರೀತಿ ಹೇಗೆ ಎಂಬುದನ್ನು ತಿಳಿಸಿಕೊಟ್ಟರು. ಡಾ. ಭಾಗ್ಯಲಕ್ಷ್ಮಿ ಇವರನ್ನು ವೇದಿಕೆಗೆ ಪರಿಚಯಿಸಿದರು.

ಪ್ರೊ. ಕೆ.ಪಿ. ನರಸಿಂಹಮೂರ್ತಿ, ಗೌರವ ಕಾರ್ಯದರ್ಶಿಗಳು ಎ.ಪಿ.ಎಸ್ ಶಿಕ್ಷಣ ಸಂಸ್ಥೆ ಇವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ಇವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ, ಸಮಾಜದಲ್ಲಿ ಮೊದಲ ಸೇವೆಯಾಗಿ, ಬೇರೆಯವರ ಅಂಗಳವನ್ನು ತೊಳೆಯುವ ಮುನ್ನ, ತಮ್ಮತಮ್ಮ ಅಂಗಳವನ್ನು ತೊಳೆದು ಜಗತ್ತಿಗೆ ಬೆಳಕಾಗಬೇಕು ಎಂದರು. ಅಲ್ಲದೇ ಸಮಾಜದಲ್ಲಿ ಮಾಡಬೇಕಾದ ಪ್ರಮುಖ ಕೆಲಸವೆಂದರೆ, ನೀರು, ವಿದ್ಯುತ್, ಪರಿಸರವನ್ನು ಉಳಿಸಬೇಕು ಆಗ ಮಾತ್ರ ನಮ್ಮ ಸೇವೆ ಸಮಾಜಕ್ಕೆ ಸಲ್ಲಿಸಿದಂತೆ ಎಂದು ನುಡಿದರು.



Principal
A.P.S. College of Commerce
N. R. Colony,
Bangalore - 560 019.

# ಎನ್.ಎಸ್.ಎಸ್ ವರದಿ

ಈ ವರ್ಷದ ಎನ್.ಎಸ್.ಎಸ್ ವಾರ್ಷಿಕ ಶಿಬಿರವನ್ನು ರಾವುಗೋಡ್ಲು ಗ್ರಾಮ ಬೆಂಗಳೂರು ದಕ್ಷಿಣ ವಲಯದಲ್ಲಿ ಹಮ್ಮಿಕೊಳ್ಳಲು ಎನ್.ಎಸ್.ಎಸ್ ಘಟಕದ ವತಿಯಿಂದ ಪ್ರಾಂಶುಪಾಲರ ಸಮ್ಮುಖದಲ್ಲಿ ನಿರ್ಧರಿಸಲಾಯಿತು. ದಿನಾಂಕ- 24-03-2018 ರಂದು ನಾವು ಈ ಗ್ರಾಮಕ್ಕೆ ಆಗಮಿಸಿದೆವು ನಂತರ ಅಂದು ಉದ್ಘಾಟನಾ ಸಮಾರಂಭವನ್ನು ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಹಾಗೂ ಮುಖ್ಯ ಅತಿಥಿಗಳಾದ ಶ್ರೀಯುತ ಆರ್.ಎನ್ ಶ್ರೀನಿವಾಸಮೂರ್ತಿ ಎಸ್.ಡಿ.ಎಂ.ಸಿ ಅಧ್ಯಕ್ಷರು ಹಾಗೂ ರಾವುಗೋಡ್ಲು ಗ್ರಾಮಸ್ಥರ ಸಮ್ಮುಖದಲ್ಲಿ ನೆರೆವೇರಿಸಲಾಯಿತು.

25-03-2018 ಭಾನುವಾರದಂದು ಬೆಳಿಗ್ಗೆ 5:30ರಿಂದ ಶಿಬಿರದ ಚಟುವಟಿಕೆಗಳನ್ನು ಧ್ವಜಾರೋಣದ ಮುಖಾಂತರ ಪ್ರಾರಂಭಿಸಲಾಯಿತು. ಶ್ರೀರಾಮ ದೇವಸ್ಥಾನದ ಪ್ರಾಂಗಣವನ್ನು ಹಾಗೂ ಊರಿನ ಪ್ರಮುಖ ಬೀದಿಗಳನ್ನು ಸ್ವಚ್ಛಗೊಳಿಸಲಾಯಿತು. ಸಂಜೆ ಎ.ಪಿ.ಎಸ್ ಕಲಾ ಮತ್ತು ವಿಜ್ಞಾನ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಹರೀಶ್ ರವರು ಆಗಮಿಸಿ, "ಜಾನಪದ ಮತ್ತು ಜನ ಸೇವೆ" ಎಂಬ ವಿಷಯವನ್ನು ಕುರಿತು, ವಿಶೇಷ ಉಪನ್ಯಾಸವನ್ನು ನೀಡಿದರು. ಜನಪದರ ಸೇವೆ, ಜಾಗತೀಕರಣದ ಸೇವೆ, ವಿದ್ಯಾರ್ಥಿಗಳ ಸೇವೆ ಯಾವ ರೀತಿ ಇತ್ತು, ಇರಬೇಕು ಎಂಬುದನ್ನು ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

26-03-2018 ರಂದು ಸೋಮವಾರದಂದು ದಿನನಿತ್ಯದಂತೆ ಎಲ್ಲಾ ಚಟುವಟಿಗಳು ಪ್ರಾರಂಭಗೊಂಡವು, ಗ್ರಾಮದ ರಸ್ತೆಗಳನ್ನು ಸ್ವಚ್ಛಗೊಳಿಸಿದೆವು, 3:30ಕ್ಕೆ ವಿಶೇಷ ಉಪನ್ಯಾಸವನ್ನು ನೀಡಲು ಎ.ಪಿಎಸ್. ವಾಣಿಜ್ಯ ಕಾಲೇಜಿನ ಪ್ರೊ. ಬಿ.ಕೆ. ಪ್ರಭಾಕರ್ ನಿರ್ವಾಹಕ ವಿಭಾಗ ಇವರು ಆಗಮಿಸಿ, "ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವದ ಮಹತ್ವ" ಎಂಬ ವಿಷಯವನ್ನು ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ಚಲನಚಿತ್ರ ನಟ ಹಾಗೂ ನಿರ್ದೇಶಕರು ಆದಂತಹ ಮಧುಸೂದನ್ ಅವರೂ ಸಹ ಬಂದಿದ್ದು ವಿದ್ಯಾರ್ಥಿಗಳ ಬದುಕಿನಲ್ಲಿ ಶಿಕ್ಷಣದ ಮಹತ್ವ ಎಂಬ ವಿಷಯವನ್ನು ಕುರಿತು ಮಾತನಾಡಿದರು.

27-03-2018 ಮಂಗಳವಾರದಂದು ದೈನಂದಿನ ಕಾರ್ಯಚಟುವಟಿಕೆಗಳಂತೆ ಶ್ರಮಾದಾನದ ಬದಲಾಗಿ ಐತಿಹಾಸಿಕವಾಗಿರುವ ಗುಂಡಾಂಜನೇಯ ಬೆಟ್ಟಕ್ಕೆ ಚಾರಣಕ್ಕೆ ಹೋಗಿದ್ದೇವು. ಸಂಜೆ ಗ್ರಾಮದ ನಾಗರೀಕರೊಂದಿಗೆ ಜನಪದ ಕ್ರೀಡೆಯಲ್ಲಿ ಪಾಲ್ಗೊಂಡು ಸಂಭ್ರಮಿಸಿದೆವು.

28-03-2018 ಬುಧವಾರದಂದು ಗ್ರಾಮದ ಚರಂಡಿ ಮತ್ತು ಬೀದಿಗಳನ್ನು ಸ್ವಚ್ಛಗೊಳಿಸಲಾಯಿತು. ಸಂಜೆ 3:30ರ ಕಾರ್ಯಕ್ರಮದಲ್ಲಿ ಎ.ಪಿ.ಎಸ್. ವಾಣಿಜ್ಯ ಕಾಲೇಜಿನ ಎಲ್ಲಾ ಮಹಿಳಾ ಉಪನ್ಯಾಸಕಿಯರು ಆಗಮಿಸಿದ್ದರು. ಅಂದು ಸಂಜೆ ನಮ್ಮ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಭಾಗ್ಯಲಕ್ಷ್ಮೀ ಇವರು ಆಗಮಿಸಿ "ವ್ಯಕ್ತಿತ್ವ ವಿಕಸನ ಹಾಗೂ ಸೇವಾ ಮನೋಭಾವ" ಎಂಬ ವಿಷಯವನ್ನು ಕುರಿತು. ಮಾತನಾಡಿದರು.

29-03-2018 ಗುರುವಾರದಂದು ಧ್ವಜಾರೋಹಣದ ನಂತರ. ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಮೈದಾನವನ್ನು ಸ್ವಚ್ಛಗೊಳಿಸಿ, ಗಿಡಗಳಿಗೆ ಪಾಥಿಮಾಡಿ ನೀರೆರೆಯಲಾಯಿತು. ನಂತರ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳ ಅಭ್ಯಾಸ ನಡೆಸಲಾಯಿತು.

30-03-2018 ಶುಕ್ರವಾರದಂದು ಬೆಳಗಿನ ಚಟುವಟಿಕೆಗಳನ್ನು ಮುಗಿಸಿ ಸಮಾರೋಪ ಸಮಾರಂಭದ ವೇದಿಕೆಯನ್ನು ಸಿದ್ಧಗೊಳಿಸಲಾಯಿತು. ಈ ಸಮಾರಂಭವನ್ನು 11:30ಕ್ಕೆ ಪ್ರಾರಂಭಿಸಲಾಯಿತು. ಕಾರ್ಯಕ್ರಮಕ್ಕೆ ವಾಣಿಜ್ಯಕಾಲೇಜಿನ ಪ್ರಾಂಶುಪಾಲರು, ರಾವುಗೋಡ್ಲು ಗ್ರಾಮದ ಸದಸ್ಯರಾದ ರೇಣುಕಮ್ಮ. ಪ್ರೊ. ಸುಂದರ್‌ರಾಜ್ ಕನಕ ಕಾಲೇಜು, ಬೆಂಗಳೂರು ಇವರು ಆಗಮಿಸಿದ್ದರು. ಇವರು ರಾಷ್ಟ್ರದ ಹಿತಾಶಕ್ತಿ, ಯುವಕರ ಪಾತ್ರ, ಸ್ವಚ್ಛ ಸಮಾಜದ ಸ್ಥಿತಿ, ರಾಷ್ಟ್ರದ ಏಳ್ಗೆ ಇತರ ವಿಷಯಗಳನ್ನು ಕುರಿತು ಮಾತನಾಡಿದರು. ಎ.ಪಿ.ಎಸ್. ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಪ್ರೊ. ಕೆ.ಪಿ. ನರಸಿಂಹಮೂರ್ತಿ ರವರು ಆಗಮಿಸಿದರು. ಇವರು ಎನ್.ಎಸ್.ಎಸ್. ಶಿಬಿರದ ಉದ್ದೇಶ, ಗಾಂಧೀ ತತ್ವಗಳು, ಸ್ವರಾಜ್ಯ ಪರಿಕಲ್ಪನೆಗಳನ್ನು ಕುರಿತು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಈ ಎಲ್ಲಾ ಕಾರ್ಯಚಟುವಟಿಕೆಗಳಲ್ಲಿ ಶಿಬಿರಾಧಿಕಾರಿಯಾದ ವೆಂಕಟೇಶಯ್ಯ ಕೆ.ಎಂ ಮತ್ತು ಸಹ ಶಿಬಿರಾಧಿಕಾರಿಯಾದ ಹನುಮಂತರಾಯ ಎನ್. ಇದ್ದರು. ಕಾರ್ಯಕ್ರಮದ ನಿರೂಪಣೆಯನ್ನು ವಿದ್ಯಾರ್ಥಿ ನೇಹ ಕೌಸರ್, ನೆರವೇರಿಸಿದರು. ವಿದ್ಯಾರ್ಥಿ ಕವಿತ ಎಂ. ವಂದನೆಗಳನ್ನು ಅರ್ಪಿಸುವುದರೊಂದಿಗೆ ಕಾರ್ಯಕ್ರಮವನ್ನು ಮುಕ್ತಾಯ ಗೊಳಿಸಲಾಯಿತು.

**ಪ್ರೊ. ವೆಂಕಟೇಶಯ್ಯ ಎಮ್**
ಸಂಯೋಜಕರು – ಎನ್‌ಎಸ್‌ಎಸ್

**"Those who can't work with their hearts achieve but a hollow, half-hearted success that breeds bitterness all around."**



Principal
A.P.S. College of Commerce
N. R. Colony,
Bangalore - 560